

# ಹರಿಕ್ಷೇತ್ರದಿಂದ ಹರಕ್ಷೇತ್ರಕ್ಕೆ

ಸ್ವಾಮಿ ಕರುಣಾಕರಾನಂದ

(ಡಿಸೆಂಬರ್ ೨೦೧೩ರ ಸಂಚಿಕೆಯಿಂದ)

***(ಡಿಸೆಂಬರ್ ಸಂಚಿಕೆಯಲ್ಲಿ: ಲೇಖಕ ಸ್ವಾಮೀಜಿಯವರು ಈಗಾಗಲೇ ಮುಕ್ತಿನಾಥದ ಯಾತ್ರೆಯನ್ನು ಮುಗಿಸಿ, ಬಸ್ಸು ಹಿಡಿದು ೨೦೧೨ರ ಮೇ ೧೦ರಂದು ಪೋಖರಾಗೆ ಬಂದು ತಲುಪಿದ್ದಾರೆ. ಮುಂದಿನ ಭಾಗವನ್ನು ಓದಿ.)***

## ತಪ್ಪು ಸರಿಯಾದುದು!

ನನ್ನ ಮುಂದಿನ ಗುರಿ ಶ್ಯಾಮಲಾತಾಲ್ ಆಗಿತ್ತು. ಅಲ್ಲಿನ ಆಶ್ರಮದವರಿಗೆ ಇ-ಮೇಲ್‌ನಲ್ಲಿ ನಾನು ಮೇ ೧೧ರ ಬೆಳಿಗ್ಗೆ ಬರುತ್ತೇನೆ ಎಂದು ತಿಳಿಸಿದ್ದೆ. ಆದರೆ, ಟ್ರೈನಿನ ಟಿಕೆಟ್ ಗೋರಖ ಪುರದಿಂದ ಲಕ್ನೋಗೆ ೨೦೧೨ರ ಮೇ ೧೦ರ ರಾತ್ರಿಗೆ ಇತ್ತು. ಹಾಗೆಯೇ ಲಕ್ನೋದಿಂದ ಠನಕಪುರಕ್ಕೆ ಮೇ ೧೧ರ ರಾತ್ರಿ ಟ್ರೈನಿಗೆ ಬುಕ್ ಆಗಿತ್ತು! ಅಂದರೆ, ನಾನು ಶ್ಯಾಮಲಾತಾಲ್‌ಗೆ ೧೨ರ ಬೆಳಿಗ್ಗೆ ಸೇರಬೇಕಾಗಿತ್ತು, ಒಂದು ದಿನ ತಡವಾಗಿ! ಅದೃಷ್ಟ ವಶಾತ್ ಪೋಖರಾದಲ್ಲಿದ್ದಾಗ, ನಮ್ಮ ಕಾಟ್ಮಂಡೂ ಆಶ್ರಮದ ಸ್ವಾಮೀಜಿಯವರು ನನಗೆ ಫೋನ್ ಮಾಡಿ ಹೊಸ ಮಾರ್ಗದರ್ಶನ ಮಾಡಿದರು, ನೇಪಾಳದ ಪಶ್ಚಿಮಕ್ಕಿರುವ ಮಹೇಂದ್ರನಗರದ ಮೂಲಕ ಬನ್ಬಾಸಾ ಎಂಬಲ್ಲಿಂದ ಭಾರತದ ಗಡಿ ದಾಟಿ ಠನಕಪುರಕ್ಕೆ ಸೀದಾ ಹೋಗುವಂತೆ! ಸರಿ, ಪೋಖರಾದಿಂದ ೧೦ನೇ ತಾರೀಖು ಮಧ್ಯಾಹ್ನ ೧೨.೫೦ಕ್ಕೆ ಒಂದು ಬಸ್ ಬುಕ್ ಮಾಡಿಸಿ ಮಾರನೇ ದಿನ ೧೧ನೆ ತಾರೀಖು ಬೆಳಿಗ್ಗೆಯೆ ಠನಕಪುರಕ್ಕೆ ಬಂದು ಮುಟ್ಟಿದೆ. ನಾನು ಅಚಾತುರ್ಯದಿಂದ ಮಾಡಿದ ತಪ್ಪನ್ನು ಭಗವಂತ ಹೀಗೆ ಸರಿಪಡಿಸಿದ್ದ!

## ಮತ್ತೆ ಹಿಮಾಚಲಕ್ಕೆ

ಶ್ಯಾಮಲಾತಾಲ್ ಮತ್ತು ಮಾಯಾವತಿಯ ರಾಮಕೃಷ್ಣ ಆಶ್ರಮಗಳಲ್ಲಿ ಮೂರು ಮೂರು ದಿನಗಳು ಕಳೆದೆನು. ಒಂದು ವಾರ ಆಲ್ಮೋರಾದಲ್ಲಿ ಉಳಿದು ಸ್ವಾಮಿ ವಿವೇಕಾನಂದರಿಗೆ ಹಾಗೂ ಶ್ರೀರಾಮಕೃಷ್ಣರ ಉಳಿದ ನೇರ ಶಿಷ್ಯರಿಗೆ ಸಂಬಂಧಿಸಿದ ನೆನಪುಗಳನ್ನು ಜೀವಂತಗೊಳಿಸಿಕೊಂಡೆನು. ಮೇ ೨೩ರಂದು ಕಾಥ್‌ಗೋಡಾಮ್‌ನಿಂದ ಟ್ರೈನಿನಲ್ಲಿ ಹೊರಟು ಮೇ ೨೪ರಂದು ದೆಹಲಿ ತಲುಪಿದೆನು. ಇದ್ದಕ್ಕಿದ್ದಂತೆ ಫ್ರಿಜ್‌ನಿಂದ ಬೆಂಕಿಯ ಮೇಲಿಟ್ಟಿರುವ ಬಾಣಲೆಗೆ ಯಾವುದಾದರೂ ತಿನ್ನುವ ವಸ್ತುವನ್ನು ಹಾಕಿದರೆ ಬಹುಶಃ ಅದಕ್ಕೂ ಹೀಗೇ ಆಗುತ್ತೇನೋ ಎನಿಸಿತು, ದೆಹಲಿಗೆ ಬಂದಿಳಿದಾಗ! ಆ ದಿನ ದೆಹಲಿಯ ತಾಪಮಾನ ಕೇವಲ ೪೫ ಡಿಗ್ರಿಯೆಂದು ಪಾದರಸ ತೋರಿಸುತ್ತಿತ್ತು! ತಕ್ಷಣ ಅದೇ ಮಧ್ಯಾಹ್ನವೇ ೩.೫೦ಕ್ಕೆ ಹಿಮಾಚಲದ ಚಂಬಾ ಎಂಬಲ್ಲಿಗೆ ಹೊರಡಲು ದೆಹಲಿಯ ಕಾಶ್ಮೀರಿ ಗೇಟ್‌ನ ಬಸ್‌ನಿಲ್ದಾಣದಲ್ಲಿ ಹಿಮಮಣಿ ಎಕ್ಸ್‌ಪ್ರೆಸ್‌ನ್ನು ಹತ್ತಿದೆ. ಟಿಕೆಟ್ ರೂಪಾಯಿ ೬೮೦. ಒಂದು ತಿಂಗಳ ಹಿಂದೆಯೇ ಮೈಸೂರಿನಿಂದಲೇ ಆನ್‌ಲೈನ್ ಬುಕ್ ಮಾಡಿಸಿದ್ದೆ. ಬಸ್ಸು ಮೊದಲು ದೆಹಲಿ, ಹರಿಯಾಣಾ, ಪಂಜಾಬಿನಲ್ಲಿ ಸಾಗುತ್ತಿದ್ದಾಗ, ಅಸಾಧ್ಯ ಬಿಸಿಲಿಗೆ ಬಿಸಿ ಬಿಸಿ ಗಾಳಿ ಮುಖವನ್ನು ಸುಡುತ್ತಿತ್ತು. ಸಾಲದ್ದಕ್ಕೆ ಕಿಟಕಿಯ ಬಳಿಯ ಸೀಟು! ನನ್ನ ಆಯ್ಕೆ 'ನಾನೇ ತೋಡಿಕೊಂಡ ಬಾವಿ'ಯಾಗಿತ್ತು! 'ಭೇಷ್, ಒಳ್ಳೇ ಪಾಠ' ಎಂದುಕೊಂಡೆ ಮನಸ್ಸಿನಲ್ಲಿ. ಸಾಯಂಕಾಲ ೭.೦೦ ರವರೆಗೂ ಇದೇ ಅವಸ್ಥೆ! ನಂತರ ಪರಿಸ್ಥಿತಿ ಬದಲಾಯಿತು. ತಂಗಾಳಿ ಒಳಬಂದು ಹಿತವೆನಿಸಿತು. ರಾತ್ರಿ ಸರ್ಪಾಕಾರದ ರಸ್ತೆಯಲ್ಲಿ ಬಸ್ ಚಲಿಸುತ್ತಿದ್ದಾಗ ಅನಿಸಿತು, ಹಿಮಾಚಲವನ್ನು ಪ್ರವೇಶಿಸಿದೆ ಎಂಬುದಾಗಿ.

ಬಸ್ಸು ಚಂಬಾವನ್ನು ತಲುಪಿದಾಗ ಮೇ ೨೫ರ ಬೆಳಿಗ್ಗೆ ೭.೦೦ ಗಂಟೆ. ಇದು ಹಿಮಾಚಲದ ಜಿಲ್ಲಾ ಕೇಂದ್ರ, ಪ್ರೇಕ್ಷಣೀಯ ಸ್ಥಳವೂ ಹೌದು. ಇಲ್ಲಿಂದ ಮಣಿಮಹೇಶಕ್ಕೆ ಹೋಗಬೇಕಾದರೆ ಭರ್‌ಮೌರ್ ತಲುಪಬೇಕಾಗುತ್ತದೆ. ಅದೇ ಬಸ್ ನಿಲ್ದಾಣದಲ್ಲಿ ಎದುರಿಗೇ ಭರ್‌ಮೌರ್‌ಗೆ ಹೋಗುವ ಬಸ್ಸೊಂದು ನಿಂತಿತ್ತು. "ಮಹಾರಾಜ್, ಕಹಾ ಜಾನಾ ಹೈ?" ಎಂದು ಕೇಳಿದ ಬಸ್ ಚಾಲಕ. 'ಭರ್‌ಮೌರ್' ಎಂದೆ. ಬಸ್ಸಿನ ಕೆಳಗೆ ಇಳಿಯುತ್ತ, "ಬೈಠಿಯೆ. ಥೋಡಿ ಹೀ ದೇರ್ ಮೇ ಚಲೇಗಿ (ಕುಳಿತುಕೊಳ್ಳಿ, ಇನ್ನು ಸ್ವಲ್ಪ ಹೊತ್ತಿನಲ್ಲೇ ಹೊರಡುತ್ತದೆ)" ಎಂದ. ಸರಿ, ನಾನೂ ಚಹಾ ಸೇವಿಸಿ, ಬಸ್ಸಿನಲ್ಲೇ ಕುಳಿತುಕೊಂಡು ಉಪಾಹಾರ ಸೇವಿಸಿದೆ. ಸುಮಾರು ೮.೪೦ಕ್ಕೆ ಬಸ್ ಚಂಬಾ ಬಿಟ್ಟು ಭರ್‌ಮೌರ್ ಕಡೆ ಹೊರಟಿತು. ನಿಜವಾಗಿ, ಹಿಮಾಚಲ ಕೂಡ ದೇವಭೂಮಿಯೇ ಸರಿ! ಅದೇನು ಸೌಂದರ್ಯಶ್ರೀ, ರಸ್ತೆಯ ಎರಡೂ ಪಕ್ಕದಲ್ಲಿ! ಪರ್ವತಗಳನ್ನು ಏರುತ್ತ ಇಳಿಯುತ್ತ, ಒಮ್ಮೆ ಎಡಕ್ಕೂ, ಇನ್ನೊಮ್ಮೆ ಬಲಕ್ಕೂ ವಾಲುತ್ತ ತನ್ನ ಗುರಿಯೆಡೆಗೆ ಬಸ್ಸು ಸಾಗುತ್ತಿತ್ತು. ಬಿಳಿನೊರೆಯ ಸೀರೆಯಿಂದ, ತರತರನಾದ ಅಲೆಗಳೆಂಬ ಆಭರಣ ತೊಟ್ಟ ಗರತಿ ರಾವಿನದಿ ತನ್ನ ಪತಿ ಸಮುದ್ರರಾಜನನ್ನೇ ಮನದಲ್ಲಿ ಸ್ಮರಿಸುತ್ತ ಅವನ ಕಡೆಗೆ ಸಂಭ್ರಮದಿಂದ ವೇಗವಾಗಿ ಹರಿಯುತ್ತಿರುವ ದೃಶ್ಯ, ಸಾಧಕನೊಬ್ಬನು ಭಗವಂತನಲ್ಲಿರಿಸಬೇಕಾದ ನಿಷ್ಠೆಯನ್ನು ನೆನಪಿಗೆ ತಂದುಕೊಟ್ಟಿತು. ಅಗೋ, ಹಿಮದ ರಾಶಿಯ ಬೆಟ್ಟ ಇಣುಕುತ್ತಲಿದೆ!

'ಕೀಚ್...' ಬಸ್ಸು ಬ್ರೇಕ್ ಹೊಡೆದು ನಿಂತಿತು. "ಏನಾಯ್ತಪ್ಪ?" ಅಂದುಕೊಂಡೆ. ದೊಡ್ಡ ಕುರಿಮಂದೆಯನ್ನು ರಸ್ತೆಯ ಪಕ್ಕದಲ್ಲಿ

ಹೊಡೆದುಕೊಂಡು ಬರುತ್ತಿದ್ದರು ಆರು ಜನ ಕುರುಬರು. ಅದೆಂತಹ ಉದ್ದುದ್ದ ತುಪ್ಪಳಗಳು ಇವುಗಳದ್ದು! 'ಬಿಲ್ಟ್-ಇನ್ ಕಂಬಳಿ'ಯನ್ನು ಮೇಲೆ ಹೊದೆಸಿಯೇ ಭಗವಂತ ಇವುಗಳನ್ನು ಇಲ್ಲಿಗೆ ಕಳಿಸಿದ್ದ. ಸುಮಾರು ಅರ್ಧ ಗಂಟೆ ಇವುಗಳ 'ಮೇ ಫಾಸ್ಟ್' ವೀಕ್ಷಿಸಿದ ಬಸ್ಸು ಪುನಃ ಹೊರಟಿತು. 'ಮೇ' 'ಮೇ' ಎಂದು ಅರಚುತ್ತ ಕೆಲವು ಮಣ್ಣಿನ ದಿಬ್ಬದ ಮೇಲೆ ಹೋದರೆ, ಇನ್ನು ಕೆಲವು ನಮ್ಮ ಬಸ್ಸಿನ ಕೆಳಗೇ ತೂರಲು ನೋಡುತ್ತಿದ್ದವು. ಅವುಗಳನ್ನು ಒಂದು ತಹಬದಿಗೆ ತರಲು ಹೆಣಗುತ್ತಿದ್ದರು ನಮ್ಮ ಕುರುಬ ಸ್ನೇಹಿತರು!

### ಭರ್‌ಮೌರಿಗೆ

ಸುಮಾರು ೧೧.೦೦ ಗಂಟೆಗೆ ಬಸ್ಸು ಭರ್‌ಮೌರ್ ಮುಟ್ಟಿತು. ಮೈಸೂರಿನಿಂದಲೇ ನಾನು ಅಲ್ಲಿನ ಅಣ್ಣಾ ಅಡ್ವೆಂಚರ್ಸ್ ಆಂಡ್ ಟೂರ್ಸ್‌ನ ಮಾಲೀಕರಾದ ಗೋಪಾಲ್ ಚೌಹಾನ್‌ರ ಬಳಿ ನನ್ನ ಮಣಿಮಹೇಶ ಯಾತ್ರೆಯ ಬಗ್ಗೆ ತಿಳಿಸಿ ರೂ.೮,೫೦೦ಕ್ಕೆ ಐದು ದಿನಗಳ ಯಾತ್ರೆಗೆ ಅವರ ಮಾರ್ಗದರ್ಶನದಲ್ಲಿ ಹೋಗುವುದೆಂದು ಮಾತನಾಡಿ ನಿರ್ಧರಿಸಿದ್ದೆನು. ಇದರಲ್ಲಿ ಐದೂ ದಿನಗಳ ಊಟ-ತಿಂಡಿಗಳ, ವಸತಿಯ, ಟ್ಯಾಕ್ಸಿಯ, ಒಬ್ಬ ಮಾರ್ಗದರ್ಶಿ ಮತ್ತು ಒಬ್ಬ ರಕ್ಷಕರ ಖರ್ಚು ಸೇರಿತ್ತು. ನನ್ನೊಬ್ಬನನ್ನೇ ಮಣಿಮಹೇಶಕ್ಕೆ ಕರೆದುಕೊಂಡು ಹೋಗಿ ನಂತರ ಭರ್‌ಮೌರ್‌ನಲ್ಲಿ ತಂದು ಬಿಡುವ ಜವಾಬ್ದಾರಿ ಅವರದ್ದು. ಸರಿ, ಎದುರಿಗಿರುವ ದೊಡ್ಡ ಲಾಡ್ಜ್ ಒಂದರಲ್ಲಿ ನನಗೆ ಒಂದು ಸುಸಜ್ಜಿತ ಕೋಣೆಯ ವ್ಯವಸ್ಥೆ ಮಾಡಲಾಯಿತು. ಹಿಂದಿನ ದಿನ ಮಧ್ಯಾಹ್ನದಿಂದ ಬಹಳ (ಸುಮಾರು ೨೦ ಗಂಟೆಗಳು) ಬಸ್‌ಪ್ರಯಾಣ ಮಾಡಿದ್ದರಿಂದ ಆ ದಿನ ಊಟ ಮಾಡಿ ವಿಶ್ರಾಂತಿ ತೆಗೆದುಕೊಂಡೆ. ನಮ್ಮ ಲಾಡ್ಜನ್ನು ಸುತ್ತುವರೆದು ಒಂದರ ಹಿಂದೆ ಒಂದು ನಿಂತಿದ್ದ ಬೆಟ್ಟಗಳನ್ನು ನೋಡಿದಾಗ ಮಹಾರಾಜರ ಎದುರು ಕೈಕಟ್ಟಿಕೊಂಡು ನಿಂತಿರುವ ಸೇವಕರನ್ನು ಕಂಡಂತೆ ಕಾಣಿಸಿದವು.


ಭರ್‌ಮಣಿ ದೇಗುಲ

ಭರ್‌ಮೌರ್‌ಗೆ ಆ ಹೆಸರು ಬಂದಿರುವುದು ಅಲ್ಲಿನ ದೇವಿ 'ಭರ್‌ಮಣಿ'ಯಿಂದ. 'ಬ್ರಹ್ಮಾಣಿ'ಯ ಪ್ರಾಕೃತ ರೂಪ 'ಭರ್‌ಮಣಿ'. ಈಕೆ ಸ್ಥಳೀಯರ ಪ್ರೀತಿಯ ಮಾತೆ. ಹಿಂದೆ ಶಿವನು ಆಕೆಯನ್ನು ಕರೆದುಕೊಂಡು ಬಂದು, ಈಗಿರುವ 'ಚೌರಾಸಿ ಮಂದಿರ್' (ಎಂಬತ್ತನಾಲ್ಕು ಸಣ್ಣ-ದೊಡ್ಡ ಮಂದಿರವಿರುವ ಸ್ಥಳ) ಎಂಬಲ್ಲಿ ರಾತ್ರಿ ತಂಗಿದ್ದು, ಮಾರನೇ ಬೆಳಗ್ಗೆ ಆಕೆಗೆ ಹೇಳದೆ ಕೇಳದೆ ಬಿಟ್ಟು ಹೋದನಂತೆ. ಇದರಿಂದ ಕೋಪಗೊಂಡ ದೇವಿ ಆ ಸ್ಥಳ ಬಿಟ್ಟು ಅದಕ್ಕಿಂತಲೂ ಬಹಳ ಮೇಲಿರುವ ಸ್ಥಳಕ್ಕೆ ಹೋದಳಂತೆ. ಅಂದಿನಿಂದ ಆ ಊರಿಗೆ 'ಭರ್‌ಮೌರ್' ಎಂಬ ಹೆಸರು ಬಂತು. ಮಣಿಮಹೇಶದ ಯಾತ್ರೆ ಮಾಡುವ ಮುಂಚೆ ಎಲ್ಲರೂ ತಾಯಿಯ ದರ್ಶನ ಮಾಡಿಕೊಂಡು ಆಕೆಯ ಆಶೀರ್ವಾದವನ್ನು ಪಡೆದುಹೋಗುವುದು ವಾಡಿಕೆ. ಮಾರನೇ ದಿನ ಉಪಾಹಾರವಾದ ನಂತರ ನನ್ನ ಮಾರ್ಗದರ್ಶಿ ಹೇಮ್‌ರಾಜ್ ನನ್ನನ್ನು ಕರೆದುಕೊಂಡು, ಚೌರಾಸಿ ದೇವಾಲಯ ಹಾಗೂ ಭರ್‌ಮಣಿ – ಈ ಎರಡೂ ಕಡೆ ದರ್ಶನ ಮಾಡಿಸಿದರು. ಭರ್‌ಮಣಿಗೆ ಹೋಗುವಾಗ ನನಗೆ 'ಏಕೆ ಮೊದಲು ಈಕೆಯ ದರ್ಶನ ಮಾಡಬೇಕೆಂಬ ಇನ್ನೊಂದು ರಹಸ್ಯ' ಗೊತ್ತಾಯಿತು! ಒಂದು ಗಂಟೆಯ ಕಾಲ, ೮೦ ಡಿಗ್ರಿ ಕೋನದ ಕಡಿದಾದ ಏರುರಸ್ತೆಯನ್ನು ಹತ್ತಬೇಕಾಗಿತ್ತು, ಆಕೆಯ ದರ್ಶನ ಮಾಡಬೇಕಾದರೆ! ಈ ಏರುವಿಕೆಗೆ ನಮ್ಮ ಕಾಲುಗಳು, ಶ್ವಾಸಕೋಶಗಳು ಮತ್ತು ಮನಸ್ಸು ಹೊಂದಿಕೊಂಡರೆ ಮಾತ್ರ ಮುಂದಿನ ಯಾತ್ರೆ ಸುಲಭ.

ಈ ರೀತಿಯ ಬೆಟ್ಟ ಹತ್ತಲು ನನ್ನ ವೈಯಕ್ತಿಕ ಸಲಹೆ ಇಷ್ಟು : "ಯಾವತ್ತೂ ಬೆಟ್ಟವನ್ನು ನಿಧಾನವಾಗಿ ಹತ್ತಿರಿ. ಹಿಡಿತವಿರುವ ಒಳ್ಳೆಯ ಷೂಗಳಿದ್ದರೆ ಉತ್ತಮ. ಆದಷ್ಟು ಕಡಿಮೆ ನಿತ್ಯೋಪಯೋಗಿಯ ವಸ್ತುಗಳನ್ನು ಒಂದು ಬ್ಯಾಕ್‌ಪ್ಯಾಕ್‌ನಲ್ಲಿ ಹಾಕಿಕೊಂಡು, ಬೆನ್ನಿಗೆ ತೂಗು ಹಾಕಿಕೊಂಡು ಹತ್ತಿರಿ. ವೇಗವಾಗಿ ಹತ್ತಿ ಶ್ರಮ ಮಾಡಿಕೊಂಡರೆ ಮನಸ್ಸಿನ ಮೇಲೂ ದುಷ್ಪರಿಣಾಮ ಬೀರುತ್ತದೆ. ಆಗಾಗ ಅಲ್ಲಲ್ಲಿ ನಿಂತು ಪ್ರಾಕೃತಿಕ ಸೌಂದರ್ಯವನ್ನು ಸವಿಯಿರಿ. ನಿಂಬೆಹಣ್ಣಿನ ಪಾನಕ ಇಟ್ಟುಕೊಂಡು ಆಗಾಗ ಹೀರುತ್ತಿರಿ. ಕಡಿದಾದ, ಸಮವಿಲ್ಲದ ಮೆಟ್ಟಿಲುಗಳನ್ನು ಹತ್ತುವಾಗ ಪಾದಗಳನ್ನು ಪಾರ್ಶ್ವದಿಕ್ಕಿಗಿಟ್ಟು ಮೇಲೆ ಹತ್ತುತ್ತಿದ್ದರೆ ನಿಮ್ಮ ಮೀನಖಂಡ ಹಾಗೂ ಮಂಡಿಯ ಮೇಲೆ ಭಾರ ಬೀಳುವುದಿಲ್ಲ. ಹೀಗಾಗಿ ಹೆಚ್ಚು ಆಯಾಸವಾಗುವುದಿಲ್ಲ. ಕೈಯಲ್ಲಿ ಕೋಲು ಹಿಡಿದೂ ಹತ್ತಬಹುದು."

ಭರ್‌ಮಣಿಗೆ ಸ್ಥಳೀಯರು ಕುರಿಬಲಿಯನ್ನೂ ನೀಡುವರು. ಕಲ್ಲಿನ ಮೇಲೆ ನಾಲ್ಕೈದು 'ಪಿಂಡಿ'ಗಳಿದ್ದವು. ಅದನ್ನೇ 'ಭರ್‌ಮಣಿ' ಎಂದು ಕರೆದರು ಸ್ಥಳೀಯ ಪೂಜಾರಿಗಳು. ಇಲ್ಲಿಂದ ಇಡೀ ಭರ್‌ಮೌರ್ ಸುಂದರವಾಗಿ ಕಾಣುವುದು. ಮೇಲೆ ಹೋಗಿ ದೇವಿಗೆ ನನ್ನ ಯಾತ್ರೆ ಸಫಲವಾಗಲೆಂದು ಪ್ರಾರ್ಥಿಸುತ್ತ ಸುಮಾರು ೧೧.೦೦ ಗಂಟೆಗೆ ಪುನಃ ಲಾಡ್ಜಿಗೆ ಹಿಂತಿರುಗಿದೆನು. ನಾನು ಮತ್ತು ನನ್ನ ಮಾರ್ಗದರ್ಶಿ ಊಟ ಮಾಡಿಬಂದು ಮುಂದಿನ ಸ್ಥಳವಾದ ಹಡ್‌ಸರ್‌ಗೆ ಟ್ಯಾಕ್ಸಿಯಲ್ಲಿ ಹೋದೆವು. ಮುಂದಿನ ನಮ್ಮ ಯಾತ್ರೆಗೆ ಅನುಕೂಲವಾಗುವಂತೆ ನನ್ನ ಮಾರ್ಗದರ್ಶಿ ಭರ್‌ಮೌರ್ ಮಾರುಕಟ್ಟೆಯಲ್ಲಿಯೇ ತರಕಾರಿಗಳನ್ನೂ, ಹಣ್ಣುಗಳನ್ನೂ ಕೊಂಡರು. ಅರ್ಧಗಂಟೆ ಟ್ಯಾಕ್ಸಿಯ ಪ್ರಯಾಣದ ನಂತರ ಹಡ್‌ಸರ್ ತಲುಪಿದೆವು. ಅಲ್ಲಿ ಮಣಿಮಹೇಶ ಕಾಲ್ನಡಿಗೆಯ ಮಾರ್ಗದ ಮಹಾದ್ವಾರವನ್ನು ಕಂಡೆವು.

## ಮಣಿಮಹೇಶದ ಮಹಿಮೆ

ಹಿಮಾಲಯದ ಪೀರ್ ಪಾಂಜಾಲ್ ಶಿಖರ ಶ್ರೇಣಿಗೆ ಸೇರುತ್ತದೆ ಈ ಮಣಿಮಹೇಶ. ಇದು ಸಮುದ್ರಮಟ್ಟಕ್ಕಿಂತ ೧೩,೩೯೦ ಅಡಿಗಳ ಎತ್ತರದಲ್ಲಿದೆ. ಪಾರ್ವತಿಯನ್ನು ವಿವಾಹವಾದ ನಂತರ ಶಿವನು ಈ ಮಣಿಮಹೇಶವನ್ನು ನಿರ್ಮಿಸಿದನೆಂಬುದಾಗಿ ವದಂತಿ. ಇಲ್ಲಿರುವ ಮಣಿಮಹೇಶ ಸರೋವರದ ತೀರದಲ್ಲಿ ಶಿವನು ತಪಸ್ಸು ಮಾಡಿದ್ದನೆಂಬುದಾಗಿ ಸ್ಥಳೀಯ 'ಗಡ್ಡಿ' ಜನರು ಹೇಳುವರು. ಶಿವನೇ ಆ ಜನಾಂಗದವರು ಧರಿಸುವ 'ಚುಹಾಲಿ' ಟೊಪ್ಪಿಯನ್ನೂ, 'ಚೋಲಾ' (ಒಂದು ಬಗೆಯ ಕೋಟು) ಮತ್ತು 'ಡೋರಾ' (೧೦–೧೫ ಸೆ.ಮೀ ಉದ್ದದ ಹಗ್ಗ) ಸಾಂಪ್ರದಾಯಿಕ ಉಡುಗೆಗಳನ್ನೂ ಅವರಿಗೆ ನೀಡಿದನೆಂಬುದಾಗಿ ಸ್ಥಳೀಯರ ನಂಬುಗೆ. ಗಡ್ಡಿ ಜನಾಂಗದವರು ಈ ಸ್ಥಳವನ್ನು ಶಿವಭೂಮಿಯೆಂದೂ, ತಮ್ಮನ್ನು ಶಿವಭಕ್ತರೆಂದೂ ಕರೆದುಕೊಳ್ಳುವರು.

ಸಾಂಪ್ರದಾಯಿಕವಾಗಿ ಐದು ಕೈಲಾಸಗಳಿವೆ ಎಂಬ ನಂಬಿಕೆ ಇದೆ. ಅವುಗಳಲ್ಲಿ ಮಣಿಮಹೇಶವೂ ಒಂದು. ಚೀನಾಕ್ಕೆ ಸೇರಿದ ಟಿಬೆಟ್‌ದಲ್ಲಿರುವುದು ಒಂದು **ಕೈಲಾಸ**. ಭಾರತ–ಟಿಬೆಟ್‌ಗಳ ಗಡಿಯಿರುವುದು **ಛೋಟಾ ಕೈಲಾಸ** ಅಥವಾ **ಆದಿಕೈಲಾಸ**. ಅದನ್ನೇ 'ಓಂ ಪರ್ವತ'ವೆಂದೂ ಕರೆಯುವರು. ಹಿಮಾಚಲದ ಕಿನ್ನರ್ ಜಿಲ್ಲೆಯಲ್ಲಿರುವ **ಕಿನ್ನರ ಕೈಲಾಸ** ಮೂರನೆಯದು. ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯಲ್ಲಿರುವುದು **ಶ್ರೀಖಂಡ ಕೈಲಾಸ** ನಾಲ್ಕನೆಯದ್ದು. **ಮಣಿಮಹೇಶ** ಐದನೆಯದ್ದು. ಶಿವನು ಆರು ತಿಂಗಳು ಈ ಕೈಲಾಸದಲ್ಲಿದ್ದು, ನಂತರ ಆರು ತಿಂಗಳು ಈ ಪ್ರದೇಶದ ಉಸ್ತುವಾರಿಯನ್ನು ಕೃಷ್ಣಜನ್ಮಾಷ್ಟಮಿಯಂದು ವಿಷ್ಣುವಿಗೆ ವಹಿಸಿ, ತಾನು ಪಾತಾಳದಲ್ಲಿರುತ್ತಾನಂತೆ. ಪುನಃ ಫೆಬ್ರುವರಿಯ ಕೊನೆಯಲ್ಲಿ ತನ್ನ ವಿವಾಹದ ಹಿಂದಿನ ರಾತ್ರಿ ಭರ್‌ಮೌರಿಗೆ ಹಿಂತಿರುಗುತ್ತಾನಂತೆ. ಹೀಗಿದೆ ಸ್ಥಳೀಯರ ಪ್ರತೀತಿ. ಈ ಸ್ಥಳವನ್ನು ನಾಥ ಸಂಪ್ರದಾಯದ ಮಹಾನ್ ಸಂತನಾದ ಛರ್‌ಪಟ್‌ನಾಥನು ಹುಡುಕಿದನೆಂದೂ ಹೇಳುವರು. ಇಲ್ಲಿ ಮಣಿಮಹೇಶನ ದರ್ಶನ ಮಾಡಿ ಕೊಳದಲ್ಲಿ ಸ್ನಾನ ಮಾಡಲು ಲಕ್ಷಾಂತರ ಯಾತ್ರಿಗಳು ಕೃಷ್ಣಾಷ್ಟಮಿಯಿಂದ ರಾಧಾಷ್ಟಮಿಯವರೆಗೆ ಬರುವರು. ಈ ವರ್ಷದಿಂದ, ಯಾತ್ರೆಗೆ ಹೋಗಬಯಸುವವರು ತಮ್ಮ ಹೆಸರನ್ನು ಮುಂಚೆಯೇ ನೋಂದಣಿ ಮಾಡಿಸಬೇಕು. ಈ ಯಾತ್ರೆ ಸಾಂಪ್ರದಾಯಿಕವಾಗಿ ಚಂಬಾದಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯ ಮತ್ತು ದಶನಾಮಿ ಅಖಾಡಾದಿಂದ ಪ್ರಾರಂಭವಾಗುತ್ತದೆ. ಛರ್‌ಪಟ್‌ನಾಥರ ಪವಿತ್ರ ದಂಡವನ್ನು (ಛಡೀ) ಹಿಡಿದ ಸಾಧುಗಳ ಹಾಗೂ ಭಕ್ತರ ಸಮೂಹ ಆರು ದಿನಗಳಲ್ಲಿ ಮಣಿಮಹೇಶವನ್ನು ನಡೆದು ಸೇರುತ್ತದೆ. ಮಣಿಮಹೇಶಕ್ಕೆ ತಲುಪಿದಾಗ ಇಡೀ ರಾತ್ರಿ ಅಲ್ಲಿ ಪೂಜೆಗಳನ್ನು ನೆರವೇರಿಸಿ, ಮಾರನೇ ದಿವಸ ಪವಿತ್ರ ಕೊಳದಲ್ಲಿ ಮುಳುಗುಹಾಕುತ್ತಾರೆ. ಪುರುಷಭಕ್ತರು ಶಿವಕರೋತ್ರಿಯಲ್ಲಿ ಮುಳುಗು ಹಾಕಿದರೆ, ಸ್ತ್ರೀಭಕ್ತರು ಗೌರಿಕುಂಡದಲ್ಲಿ ಮುಳುಗುಹಾಕುವರು. ಇದು ಹಿಮಾಚಲ ರಾಜ್ಯದ ಪ್ರತಿಷ್ಠಿತ ಜಾತ್ರೆಯಾದ್ದರಿಂದ ಸರ್ಕಾರದ ವತಿಯಿಂದ ಅನೇಕ ಸವಲತ್ತುಗಳನ್ನು ಆ ಸಮಯದಲ್ಲಿ ಒದಗಿಸಿ ಕೊಡುತ್ತಾರೆ. ದಾರಿಯುದ್ದಕ್ಕೂ ವಿಶ್ರಾಮತಾಣಗಳಿದ್ದು, ಭಕ್ತರಿಗೆ ಉಚಿತ ಆಹಾರವನ್ನು ನೀಡಲು ಪೈಪೋಟಿ ನಡೆಯುತ್ತದೆ! ಆ ಸಮಯದಲ್ಲಿ ಹಿಮವೆಲ್ಲ ಕರಗಿರುವುದರಿಂದ ಅದರ ಮೇಲೆ ನಡೆದು ಕೊಂಡು ಹೋಗಬೇಕಾಗಿರುವುದಿಲ್ಲ.



ವೇಗವಾಗಿ ಹರಿದುಬರುತ್ತಿರುವ ಮಣಿಮಹೇಶ ಸರೋವರದ ನೀರು

## ಧಾಂಚೋ ಮತ್ತು ಮಣಿಮಹೇಶ

ಮಧ್ಯಾಹ್ನ ಸುಮಾರು ೧.೩೦ಕ್ಕೆ ಹಡ್‌ಸರ್‌ನಿಂದ ನಮ್ಮ ಕಾಲ್ನಡಿಗೆಯನ್ನು ಶುರು ಮಾಡಿದೆವು. ಹಡ್‌ಸರ್‌ನಿಂದ ಧಾಂಚೋವಿಗೆ ೭ ಕಿ.ಮೀ ದೂರ. ಧಾಂಚೋವಿನಿಂದ ಮಣಿಮಹೇಶಕ್ಕೆ ೭.೫೦ ಕಿ.ಮೀ ದೂರ. ಬೆಟ್ಟದ ತಪ್ಪಲನ್ನು ಕೆರೆದು ಮಾಡಿದ ಎರಡಡಿಯ ರಸ್ತೆ ಅದು. ನಮ್ಮ ಬಲಕ್ಕೆ ಅತಿ ಎತ್ತರವಾದ ದೇವದಾರು ವೃಕ್ಷಗಳಿಂದ ಕೂಡಿದ ಬೆಟ್ಟವಾದರೆ, ಎಡಗಡೆಗೆ ಮಣಿಮಹೇಶದಿಂದ ವೇಗವಾಗಿ, ಆದರೆ ಸುಂದರವಾಗಿ ಹರಿದುಬರುತ್ತಿದ್ದ ಮಣಿಮಹೇಶ ಸರೋವರದ ನೀರು. ನಾನು ಹೋಗುತ್ತಿದ್ದುದು ಯಾತ್ರೆಯ ಸಮಯವಲ್ಲದ್ದರಿಂದ ರಸ್ತೆ ಇನ್ನೂ ತಯಾರಾಗಿರಲಿಲ್ಲ. ಅಲ್ಲಲ್ಲಿ ಬೆಟ್ಟ ಕುಸಿದು ಬಿದ್ದಿದ್ದರಿಂದ ಸರಿದಾಡುವ ಕಲ್ಲುಗಳ ಮೇಲೆಯೇ ನಡೆದುಕೊಂಡು ಹೋದೆ. ಅಲ್ಲೊಂದು ಜಾಗದಲ್ಲಿ ನಮ್ಮ ಮಾರ್ಗದರ್ಶಿ ಒಂದು ಪೊದೆಯನ್ನು ತೋರಿಸಿ, ಅದೊಂದು ಮದ್ದಿನ ಗಿಡವೆಂದನು. ತುರಿಕೆ ಸೊಪ್ಪಿಗೆ ಇದು ಮದ್ದೆಂದೂ, ಅದರ ಪಕ್ಕದಲ್ಲೇ ಎಲ್ಲೋ ತುರಿಕೆ ಸೊಪ್ಪೂ ಇರುತ್ತದೆಂದೂ ವಿವರಿಸಿದಾಗ, 'ಪ್ರಕೃತಿಯ ಪ್ರತೀಕಾರ' ಚಮತ್ಕಾರಕ್ಕೆ ಮನಸೋತೆ. ಇದೇ ರೀತಿ ಅವನಿಗೆ ತಿಳಿದಿರುವ ಕೆಲವು ಔಷಧ ಗುಣಗಳನ್ನೂ ವಿವರಿಸುತ್ತಿದ್ದ. ನಾನೂ ಅವನಿಗೆ ನನಗೆ ತಿಳಿದ ಪುರಾಣಗಳಿಂದ ಜೀವನಮೌಲ್ಯಗಳನ್ನು ಹೇಳುತ್ತಿದ್ದೆ. ಹೀಗೆಯೇ ನಿಧಾನವಾಗಿ ಧಾಂಚೋ ಎಂಬಲ್ಲಿಗೆ ಬಂದೆವು. ಅದು ನಮ್ಮ ಆ ದಿನದ ವಿಶ್ರಾಮತಾಣ. (ಮುಂದುವರೆಯುವುದು)